**ಪಿ ಡಬ್ಲ್ಯೂಃ 2**

**ದಿನಾಂಕಃ 01.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಎಮ್ ಹೆಚ್ ಜಿ ಅವರಿಂದಃ**

1. 2 ನೇ ವಾದಿ ಮತ್ತು ನಾನು ಅಣ್ಣ-ತಮ್ಮಂದಿರು. ನಾವು ಒಟ್ಟು 5 ಜನ ಅಣ್ಣ-ತಮ್ಮಂದಿರು, ಅವರ ಹೆಸರು ರುದ್ರಶೆಟ್ಟಿ, ಮಾಕೂಟೇಶ, ಜೀವನಮುಕ್ತ, ಷಣ್ಮುಕಪ್ಪ ಅಂದರೆ ನಾನು, ಶ್ರೀಶೈಲ. ಈ ದಿನ ಮಾಕೂಟೇಶ ನನ್ನ ಜೊತೆ ಬಂದಿರುತ್ತಾರೆ. 2 ನೇ ವಾದಿ ರೇಲ್ವೆ ಪಿ ಎಸ್ ಐ ಇದ್ದ. ಮಾಕೂಟೇಶ ಅವರು ಎ ಎಸ್ ಐ ಇದ್ದಾರೆ. ಮಾಕೂಟೇಶ ಅವರ ಮಗ ನಾಗರಾಜ ಪಿ ಎಸ್ ಐ ಇದ್ದಾರೆ. ನಾವು 5 ಜನ ಅಣ್ಣ-ತಮ್ಮಂದಿರು ವಿಭಾಗ ಮಾಡಿಕೊಂಡಿಲ್ಲ, ಕೂಡಿಯೇ ಇದ್ದೇವೆ.
2. ನಮ್ಮ ಕುಟುಂಬಕ್ಕೆ ಸುಮಾರು 25 ರಿಂದ 30 ಎಕರೆ ಜಮೀನು ಇದೆ, ಸರ್ವೆ ನಂಬರ ನೆನಪು ಇಲ್ಲ, ಅವು ಒಟ್ಟು 6 ಹೊಲಗಳು ಇವೆ. 6 ಹೊಲಗಳ ಪಹಣಿ ಸಿಗುತ್ತವೆ. ನಾವು 2 ಜಮೀನಿನ ಮೇಲೆ ಕೇಸ ಮಾಡಿರುತ್ತೇವೆ, ಆ ಜಮೀನುಗಳ ಸರ್ವೆ ನಂಬರ 9, ಅದರಲ್ಲಿ ಒಂದು ಜಮೀನು 3 ಎಕರೆ 28 ಗುಂಟೆ, ಇನ್ನೊಂದು 4 ಎಕರೆ 4 ಗುಂಟೆ ಜಮೀನು ಇದೆ. ಸದರಿ ಜಮೀನುಗಳನ್ನು ನಾವು ಖರೀದಿ ಮಾಡಿರುತ್ತೇವೆ. ಒಂದು ಜಮೀನನ್ನು 59 ವರ್ಷಗಳ ಹಿಂದೆ, ಇನ್ನೊಂದು ಜಮೀನನ್ನು ಸುಮಾರು 70 ವರ್ಷಗಳ ಹಿಂದೆ ಖರೀದಿ ಮಾಡಿರುತ್ತೇವೆ. 4 ಎಕರೆ 4 ಗುಂಟೆ ಜಮೀನನ್ನು ಕರಬಸಪ್ಪ ಚನ್ನವೀರಪ್ಪ ಕೋಟಗಿ ಅವರಿಂದ, ಇನ್ನೊಂದು ಜಮೀನನ್ನು ಅಡಿವೆಮ್ಮ ಅಡಿವೆಪ್ಪ ಮುದೇನಗುಡಿ ಅವರಿಂದ ಖರೀದಿ ಮಾಡಿರುತ್ತೇವೆ. 3 ಎಕರೆ 28 ಗುಂಟೆ ಜಮೀನನ್ನು 2 ನೇ ವಾದಿಯ ಹೆಸರಿನಲ್ಲಿ ಖರೀದಿ ಮಾಡಿರುತ್ತೇವೆ. 2003 ರಲ್ಲಿ ಸದರಿ 3 ಎಕರೆ 28 ಗುಂಟೆ ಜಮೀನಿನಲ್ಲಿ 1 ಎಕರೆ 34 ಗುಂಟೆ ಜಮೀನನ್ನು ಮಾಕೂಟೆಪ್ಪ ಅಡಿವೆಪ್ಪ ಮುದೇನಗುಡಿ ಅವರಿಗೆ ಮಾರಾಟ ಮಾಡಿದ್ದೇವು, ಆ ನಂತರ ಸದರಿ ಜಮೀನಿನಲ್ಲಿ 1 ಎಕರೆ 34 ಗುಂಟೆ ಮಾತ್ರ 2 ನೇ ವಾದಿಯ ಹೆಸರಿನಲ್ಲಿ ಉಳಿದಿತ್ತು ಎಂದರೆ ಸರಿ. ಸದರಿ

ಮಾರಿದ 1 ಎಕರೆ 34 ಗುಂಟೆ ಜಮೀನನ್ನು ಪುನಃ 2004 ರಲ್ಲಿ ನಾವು ಖರೀದಿ ಮಾಡಿದ್ದೇವು ಎಂದರೆ ಸರಿ. ಆ ರೀತಿ ಖರೀದಿ ಮಾಡಿದ ನಂತರ ಪುನಃ 3 ಎಕರೆ 28 ಗುಂಟೆ ಜಮೀನು 2 ನೇ ವಾದಿಗೆ ಬಂತು ಎಂದರೆ ಸರಿ. ವಾದ ಪತ್ರದಲ್ಲಿ ತೋರಿಸಿದ ಖರೀದಿ ಪತ್ರ ಸಂಖ್ಯೆ 445/1973-74 ಹಾಗೂ ಕೆಜಿಎನ್ 1-01028/2004-05 ಗಳು 3 ಎಕರೆ 28 ಗುಂಟೆ ಅಂದರೆ ದಾವಾ ಐಟಂ ನಂ. 3 ರ ಆಸ್ತಿಗೆ ಸಂಬಂಧಪಟ್ಟವು ಎಂದರೆ ಸರಿ. ದಾವಾ ಐಟಂ ನಂ. 3 ರ ಜಮೀನಿನ ಪೂರ್ವಕ್ಕೆ ಶರಣಪ್ಪ ನಿಂಗಪ್ಪ ಅಂಗಡಿ, ಪಶ್ಚಿಮಕ್ಕೆ ಅಡಿವೆಪ್ಪ, ಉತ್ತರಕ್ಕೆ ನಮ್ಮದೇ ಜಮೀನು ಅಂದರೆ 4 ಎಕರೆ 4 ಗುಂಟೆ ಜಮೀನು ಅಂದರೆ ಐಟಂ ನಂ. 1 ರ ಆಸ್ತಿ, ದಕ್ಷಿಣಕ್ಕೆ ಅಯ್ಯಪ್ಪ ಮುದೇನಗುಡಿ ಆತ ಈಶಪ್ಪನಿಗೆ ಮಾರಿರುತ್ತಾನೆ. ದಕ್ಷಿಣಕ್ಕೆ ಈಶಪ್ಪನದ್ದು 2 ಎಕರೆ ಜಮೀನು ಇದೆ. ಸದರಿ ಜಮೀನು 2 ಎಕರೆ ಇಲ್ಲ, 3 ಎಕರೆ 30 ಗುಂಟೆ ಇದೆ ಎಂದರೆ ಸರಿಯಲ್ಲ. ಅವರ 1 ಎಕರೆ 30 ಗುಂಟೆ ಜಮೀನು ಒತ್ತುವರಿ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಮ್ಮ ಮತ್ತು ಪ್ರತಿವಾದಿಗಳ ನಡುವೆ ಸಮಸ್ಯೆ ಶುರುವಾಗಿ 10 ವರ್ಷಗಳ ಹಿಂದೆ ಶುರುವಾಗಿದೆ. 10 ನೇ ತಾರೀಖಿನಂದು, ಆಗಸ್ಟ್ ತಿಂಗಳಲ್ಲಿ ಮಳೆಗಾಲದಲ್ಲಿ ಸಮಸ್ಯೆ ಶುರುವಾಗಿದೆ. ಸಮಸ್ಯೆ ಬಗೆಹರಿಸಿಕೊಳ್ಳಲು ಸರ್ವೆಗೆ ಅರ್ಜಿ ಕೊಟ್ಟಿಲ್ಲ.ನಮ್ಮ ಕಿರಿಕಿರಿಗೆ ಬೇಸತ್ತು ಪ್ರತಿವಾದಿಗಳೇ ಸರ್ವೇಗೆ ಅರ್ಜಿ ಕೊಟ್ಟಿದ್ದರು ಗೊತ್ತಿಲ್ಲ. ಪ್ರತಿವಾದಿಗಳು ಸರ್ವೇಗೆ ಅರ್ಜಿ ಕೊಟ್ಟಾಗ ಸರ್ವೆಯವರು ಸರ್ವೆ ಮಾಡಲು ಬಂದಾಗ ಅವರಿಗೆ ನಾವು ಸರ್ವೆ ಮಾಡಲು ಬಿಟ್ಟಿಲ್ಲ ಎಂದರೆ ಸಾಕ್ಷಿಯು ನಮ್ಮ ಹೊಲದಲ್ಲಿ ಬರಲು ಬಿಟ್ಟಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ. 1 ಮತುತ 3 ರ ಆಸ್ತಿಯನ್ನು ದಾಟಿ ಪ್ರತಿವಾದಿಗಳ ಜಮೀನನ್ನು ಕಬಳಿಸಬೇಕು ಎಂದು ಉದ್ದೇಶದಿಂದ ನಾವು ಸರ್ವೇಗೆ ಹರಕತ್ತು ಮಾಡಿರುತ್ತೇವೆ ಎಂದರೆ ಸರಿಯಲ್ಲ.

4. ಸರ್ವೇ ನಂ. 9 ರಲ್ಲಿ ಒಟ್ಟು 32 ಎಕರೆ ಜಮೀನು ಇದೆ. ಅದರಲ್ಲಿ ಒಟ್ಟು 20 ಜನರ ಪಹಣಿ ಇವೆ. ಸರ್ವೆ ನಂ. 9 ರಲ್ಲಿ ಹಿಸ್ಸಾ 3 ರಲ್ಲಿ ನಮ್ಮದು 3 ಎಕರೆ 28 ಗುಂಟೆ

ಜಮೀನು ಇದೆ, ಹಾಗೂ ಹಿಸ್ಸಾ 1 ರಲ್ಲಿ 4 ಎಕರೆ 4 ಗುಂಟೆ ಜಮೀನು ಇದೆ. ಹಿಸ್ಸಾ 6 ರಲ್ಲಿ 3 ಎಕರೆ 38 ಗುಂಟೆ 3 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ.

5. ನಾನು ಹೇಳಿದಂತೆ ಯಾವುದೇ ಘಟನೆ ನಡೆಯದಿದ್ದರೂ ಸಹ ನಾವು ಸುಳ್ಳು ದಾವೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಜಮೀನನ್ನು ಒತ್ತುವರಿ ಮಾಡಿಕೊಳ್ಳಬೇಕು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ 3 ಜನ ಪೊಲೀಸರು ಇದ್ದು, ಅವರ ಅಧಿಕಾರ ಉಪಯೋಗಿಸಿಕೊಂಡು ನಾವು ಪ್ರತಿವಾದಿಗಳಿಗೆ ತೊಂದರೆ ನೀಡಲು ಸುಳ್ಳು ದಾವೆ ಮಾಡಿ, ಸುಳ್ಳು ಸಾಕ್ಷಿ ನುಡಿಯುತ್ತೇನೆ ಎಂದರೆ ಸರಿಯಲ್ಲ. ಇದೇ ಜಮೀನುಗಳ ಕುರಿತು ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ನಾವು ದಾವೆ ಮಾಡಿರುತ್ತೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ಮಾಲೀಕರು ಅಲ್ಲ ಅಂದಿದ್ದಕ್ಕೆ ಮಾಡಿರುತ್ತೇವೆ ಎಂದು ನುಡಿಯುತ್ತಾರೆ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ.ಕೇ. ಸರಿ ಇದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ. ನ್ಯಾ.ದಂಡಧಿಕಾರಿಗಳು, ಕುಷ್ಟಗಿ**